1) ಶ್ರೀಯುತರಾದ ಆರ್.ಜಿ.ಚೌಧರಿ, ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು.

2) ಶ್ರೀಯುತರಾದ ಮಲ್ಲಿಕಾರ್ಜುನ ಪ್ರಸನ್ನ, ಶಾಸಕರು

3) ಶ್ರೀಯುತರಾದ ಕೆ.ಬಿ.ಮಲ್ಲಿಕಾರ್ಜುನ ಶಾಸಕರು.

4) ಶ್ರೀಯುತರಾದ ಎಂ.ವೀರಭದ್ರಪ್ಪ, ಶಾಸಕರು

5) ಶ್ರೀಯುತರಾದ ಕೆ.ಹುಚ್ಚಪ್ಪ, ಮಾಜಿ ಶಾಸಕರು.

ವಿಷಯ :- ಟಿ.ಬಿ.ಕಾವಲ್ ಏತ ನೀರಾವರಿ ಯೋಜನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1596 (1591)

ಶ್ರೀಎಸ್.ಆರ್.ಲಕ್ಷ್ಮಯ್ಯ (ಬೀರೂರು):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)ಕಡೂರು ತಾಲ್ಲೂಕಿನ ಟಿ.ಬಿ.ಕಾವಲ್ ಏತ ನೀರಾವರಿ ಯೋಜನೆಗೆ ಎಂದು ಶಂಕುಸ್ಥಾಪನೆ ಮಾಡಲಾಯಿತು.

ಆ)ಈ ಯೋಜನೆಯ ಅಂದಾಜು ವೆಚ್ಚವೆಷ್ಟು

ಇ)ಈ ಯೋಜನೆಯು ಪೂರ್ಣಗೊಂಡ ನಂತರ ನೀರಾವರಿ ಆಗಲಿರುವ ಅಚ್ಚುಕಟ್ಟಿನ ಪ್ರದೇಶದ ವಿಸ್ತೀರ್ಣ ಎಷ್ಟು ಹಾಗೂ ಈ ಕಾಮಗಾರಿಯ ಬಗ್ಗೆ ಈವರೆವಿಗೂ ಸಾಧಿಸಿರುವ ಪ್ರಗತಿ ಏನು?

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) 20-5-93

ಆ) 25.00 ಲಕ್ಷರೂ.ಗಳು

ಇ) ಈ ಕಾಮಗಾರಿಯ ಅಂದಾಜು ಪಟ್ಟಿ ಪರಿಶೀಲನಾ ಹಂತದಲ್ಲಿದೆ.

ವಿಷಯ :- ಅಫಜಲ್‌ಪುರ ತಾಲ್ಲೂಕಿನ ಏತ ನೀರಾವರಿ ಯೋಜನೆ ಕುರಿತು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1597 : (1523)

ಶ್ರೀಮಾಲೀಕಯ್ಯ ವಿ.ಗುತ್ತೇದಾರ್ (ಅಫಜಲ್‌ಪುರ):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ)ಅಫಜಲ್‌ಪುರ ತಾಲ್ಲೂಕಿನಲ್ಲಿರುವ 10 ಏತ ನೀರಾವರಿ ಯೋಜನೆಗಳಲ್ಲಿ ಎಷ್ಟು ಕಾರ್ಯಗತವಾಗಿದೆ.

ಆ) ಕಾರ್ಯಗತವಾದ ಏತ ನೀರಾವರಿ ಯೋಜನೆಗಳಿಂದ ಎಷ್ಟು ಎಕರೆ ಭೂಮಿ ನೀರಾವರಿ ಸೌಲಭ್ಯ ಒದಗಿಸಲಾಗಿದೆ.

ಇ)ಕಾರ್ಯಗತವಾಗದ ಏತ ನೀರಾವರಿ ಯೋಜನೆಗಳಿಗೆ ಕಾರಣವೇನು

ಈ)ಕಾರ್ಯಗತವಾದ ಏತ ನೀರಾವರಿ ಯೋಜನೆಗಳ ಖರ್ಚು ಎಷ್ಟು?

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) 10ಯೋಜನೆಗಳು ಕಾರ್ಯಗತಗೊಂಡಿವೆ.

ಆ) 1173 ಎಕರೆ.